ಎ) ವರದಿಯನ್ನು ಅವರು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಇದನ್ನು ಅನುಷ್ಠಾನಗೊಳಿಸುವ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ

794 (1107) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಮತಿ ಪಡೆದಿರುವ ಲಾಟರಿ ಉದ್ಯಮಗಳ ಸಂಖ್ಯೆ ಎಷ್ಟು ,

ಆ) ಯಾವ, ಯಾವ ರಾಜ್ಯಗಳ ಲಾಟರಿ ವಹಿವಾಟಿಗೆ ರಾಜ್ಯದಲ್ಲಿ ಅವಕಾಶ ನೀಡಲಾಗಿದೆ ,

ಇ) ಇವುಗಳಲ್ಲಿ ಆನ್‌ಲೈನ್ ಮತ್ತು ಒಂದಂಕಿ ಲಾಟರಿಗಳು ಎಷ್ಟು ,

ಈ) ಲಾಟರಿ ಉದ್ಯಮದಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ವರಮಾನವೆಷ್ಟು ,

ಉ) ಲಾಟರಿ ವ್ಯಾಪಾರದಿಂದ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ಸರ್ಕಾರ ಲಾಟರಿ ಉದ್ಯಮವನ್ನು ನಿಷೇಧಿಷಲು ಉದ್ದೇಶಿಸಿದೆಯೇ , ನಿಷೇಧದಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ಎಷು ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಕೇವಲ ರಾಜ್ಯ ಸರ್ಕಾರಗಳು ಮಾತ್ರ ಲಾಟರಿಯನ್ನು ನಡೆಸಬಹುದಾಗಿದೆ ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಪ್ರತ್ಯೇಕ ಅನುಮತಿ ಅಗತ್ಯವಿರುವುದಿಲ್ಲ ಪ್ರಸ್ತುತ ಕರ್ನಾಟಕದಲ್ಲಿ ಸಿಕ್ಕಿಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ರಾಜ್ಯಗಳ ಹಾಗೂ ರಾಯಲ್ ಗೌರ್ನಮೆಂಟ್ ಆಫ್ ಭೂತಾನ್ ಸರ್ಕಾರದ ಲಾಟರಿ ಟಿಕೇಟುಗಳು ಮಾರುಕಟ್ಟೆ ಏಜೆಂಟರುಗಳ ಮುಖಾಂತರ ವ್ಯಾಪಾರವಾಗುತ್ತಿವೆ

ಇ) ಪ್ರತಿದಿನ ವಿವಿಧ ರಾಜ್ಯ ಸರ್ಕಾರಗಳು 41–43 ಆನ್‌ಲೈನ್ ಲಾಟರಿ ಡ್ರಾಗಳನ್ನು ನಡೆಸುತ್ತಿವೆ ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಒಂದಂಕಿ ಲಾಟರಿಯನ್ನು ನಡೆಸುವಂತಿಲ್ಲ

ಈ) ಲಾಟರಿ ಉದ್ಯಮದಿಂದ 2006–07 (ಏಪ್ರಿಲ್ 2006ರಿಂದ ಡಿಸೆಂಬರ್ 2006ರ ಅಂತ್ಯದವರೆಗೆ)ನೇ ಸಾಲಿನಲ್ಲಿ ಸರ್ಕಾರಕ್ಕೆ ರೂ 34 30 ಕೋಟಿ ನಿವ್ವಳ ಆದಾಯ ಬಂದಿರುತ್ತದೆ ತೆರಿಗೆ ರೂಪದಲ್ಲಿ 2006–07 (ಏಪ್ರಿಲ್ 2006ರಿಂದ ಜನವರಿ 2007ರವರೆಗೆ)ನೇ ಸಾಲಿಗೆ ರೂ 103 40 ಕೋಟಿ ವರಮಾನ ಬಂದಿರುತ್ತದೆ

ಉ) ಹೌದು ಸರ್ಕಾರದ ಗಮನಕ್ಕೆ ಬಂದಿದೆ

ಊ) ಹೌದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ ಲಾಟರಿ ಉದ್ಯಮವನ್ನು ನಿಷೇಧಿಸಿದರೆ ಲಾಟರಿ ಉದ್ಯಮದಿಂದ ಬರುತ್ತಿರುವ ವರಮಾನ ಕೈತಪ್ಪಿ ಹೋಗುತ್ತದೆ ಟಕೇಟುಗಳ ಮಾರಾಟದ ಆಧಾರದ ಮೇಲೆ ವರಮಾನ ಅವಲಂಬಿತ ವಾಗಿರುವುದರಿಂದ ನಷ್ಟದ ಬಗ್ಗೆ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ

795 (388) ಶ್ರೀ ಶಂಕಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರ ಮತ್ತು ಮೈಸೂರು ಜಿಲ್ಲೆಯಾದ್ಯಂತ ಇರುವ ಯಾವ ಯಾವ ಸಣ್ಣ ಕೈಗಾರಿಕೆಗಳು ಮತ್ತು ಯಾವ ಯಾವ ಉತ್ಪನ್ನಗಳನ್ನು ತಯಾರಿಸುತ್ತಿವೆ ,

ಆ) ಈ ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ,

ಇ) ಪ್ರಸ್ತುತ ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರಕ್ಕೆ ತಿಳಿದಿದೆಯೇ ,

ಈ) ಹಾಗಿದ್ದಲ್ಲಿ, ಆ ಸಮಸ್ಯೆಗಳು ಯಾವುವು ,

ಉ) ಸಣ್ಣ ಕೈಗಾರಿಕೋದ್ಯಮಿಗಳ ಬೇಡಿಕೆಗಳು ಯಾವುವು , ಈ ಸಮಸ್ಯೆಗಳ ಪರಿಹಾರದ ಹಾಗೂ ಕೈಗಾರಿಕೋದ್ಯಮಿಗಳ ಬೇಡಿಕೆಗಳ ಈಡೇರಿಕೆ ವಿಚಾರದಲ್ಲಿ ಈವರೆಗೆ ಸರ್ಕಾರ ಯಾವ ಯಾವ ಕ್ರಮ ಹಾಗೂ ಮುಂದೆ ಯಾವ ಯಾವ ಕ್ರಮ ವಹಿಸುವುದು ?

ಶ್ರೀ ಶಿವಾನಂದ ಎಸ್ ನಾಯಕ್ (ಕೈಗಾರಿಕಾ ಸಚಿವರು)

ಅ) ಮೈಸೂರು ನಗರ ಮತ್ತು ಮೈಸೂರು ಜಿಲ್ಲೆಯಾದ್ಯಂತ ಇರುವ ಸಣ್ಣ ಕೈಗಾರಿಕೆಗಳು 21684

ಈ ಕೈಗಾರಿಕೆಗಳು ಮುಖ್ಯವಾಗಿ ಮರದ ಕೈಗಾರಿಕೆಗಳು, ಜನರಲ್ ಇಂಜಿನಿಯರಿಂಗ್, ರೈಸ್‌ಮಿಲ್, ಫ್ಲೋರ್‌ಮಿಲ್, ರಾಸಾಯನಿಕ ಆಧಾರಿತ ಘಟಕ, ಸೋಪ್ಸ್ ಅಂಡ್ ಡಿಟರ್‌ಜಂಟ್ಸ್, ಫಿನಾಯಿಲ್, ಗಂಧದ ಕಡ್ಡಿ, ಪ್ಲಾಸ್ಟಿಕ್ ಆಧಾರಿತ, ಕ್ಯಾಂಡಲ್ಸ್, ಇಟ್ಟಿಗೆ ತಯಾರಿಕೆ, ಮೊಸಾಯಿಕ್ ಟೈಲ್ಸ್, ಗ್ರಾನೈಟ್ ಕಟ್ಟಿಂಗ್ ಅಂಡ್ ಪಾಲಿಶಿಂಗ್, ಜಲ್ಲಿ ತಯಾರಿಕಾ ಘಟಕ, ಆಹಾರ ಉತ್ಪಾದನಾ ಘಟಕ, ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಘಟಕಗಳು, ಪ್ರಿಂಟಿಂಗ್ ಪ್ರೆಸ್, ಎಲೆಕ್ಟ್ರಾನಿಕ್ಸ್ ರೆಡಿಮೇಡ್ ಗಾರ್ಮೆಂಟ್ಸ್ ಘಟಕ ಇತ್ಯಾದಿ

ಆ) ಈ ಕೈಗಾರಿಕೆಗಳಲ್ಲಿ ಸುಮಾರು 105691 ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ

ಇ) ತಿಳಿದಿದೆ

ಈ) ಮೂಲಭೂತ ಸೌಕರ್ಯಗಳ ಕೊರತೆ, ಜಾಗತೀಕರಣ ಹಾಗೂ ಉದಾರೀಕರಣ ನೀತಿಯಿಂದಾಗಿ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಎದುರಿಸುತ್ತಿರುವ ತೀವ್ರ ಪೈಪೋಟಿ, ತಾಂತ್ರಿಕ ಉನ್ನತೀಕರಣದ ಕೊರತೆ ಇತ್ಯಾದಿ